RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ



| | | |
|---|---|---|
| ಭಾಗ-I | ಬೆಂಗಳೂರು, ಶುಕ್ರವಾರ, ಜೂನ್ ೧, ೨೦೧೮ (ಜ್ಯೇಷ್ಠ ೧೧, ಶಕ ವರ್ಷ ೧೯೪೦) | ನಂ. ೮೪೪ |
| **Part-I** | ***Bengaluru, Friday, June 1, 2018 (Jyeshta 11, Shaka Varsha 1940)*** | ***No. 844*** |



**ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು**

ವಿಷಯ: ನಗರಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ಮತಪತ್ರಗಳನ್ನು ಮುದ್ರಿಸುವ ಬಗ್ಗೆ.

ಓದಲಾಗಿದೆ: ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ 14 ಇಯುಬಿ 2017, ದಿನಾಂಕ:10.03.2017

ಪ್ರಸ್ತಾವನೆ:

***ಕರ್ನಾಟಕ ಪೌರಸಭೆಗಳ(ಕೌನ್ಸಿಲರ್‌ಗಳ ಚುನಾವಣೆ)ನಿಯಮಗಳು, 1977ರ ನಿಯಮ 36, 64 ಬಿ ಮತ್ತು 64 ಜಡ್‌ಡಿ*** ರಲ್ಲಿ ಹಾಗೂ ***ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 29, 70 ಬಿ ಮತ್ತು 70 ಎಕ್ಸ್‌ಎಫ್*** ಗಳಂತೆ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂತಹ ನಮೂನೆಯಲ್ಲಿ ಇರತಕ್ಕದ್ದಾಗಿರುತ್ತದೆ.

***ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಪ್ರಕರಣ 38ಬಿ ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ ಪ್ರಕರಣ 55ಎ*** ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತಯಂತ್ರಗಳನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಮತಯಂತ್ರಗಳಿಂದ ಚುನಾವಣೆ ನಡೆಸಲು ಚುನಾವಣೆ ನಿಯಮಗಳಲ್ಲಿ ಸೂಕ್ತ ನಿಯಮಗಳನ್ನು ರಚಿಸಲಾಗಿದೆ.

ಮೇಲೆ ಓದಲಾದ ಆದೇಶದಲ್ಲಿ ರಾಜ್ಯ ಚುನಾವಣಾ ***ಆಯೋಗವು ಭಾರತ ಸಂವಿಧಾನದ ಅನುಚ್ಛೇದ 243(ಕೆ) ಮತ್ತು 243(ಜಡ್‌ಎ)*** ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ನಗರಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ, ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಇರುವ ವ್ಯಕ್ತಿಯು, ತನ್ನ ಮತವನ್ನು ಸ್ಪರ್ಧಿಸಿರುವ ಅಭ್ಯರ್ಥಿಗಳ ಪರವಾಗಿ ನೀಡದೆಯೇ ತನ್ನ ಇಚ್ಛೆಯಂತೆ ಚಲಾಯಿಸಲು ಅನುವಾಗುವಂತೆ, ಮತಪತ್ರದಲ್ಲಿ / ಅಂಚೆ ಮತಪತ್ರದಲ್ಲಿ /ಇ.ವಿ.ಎಂ.ನಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರಿನ ಕೊನೆಯ ಸಾಲು ಅಥವಾ ಕೊನೆಯ ಪ್ಯಾನೆಲ್‌ನಲ್ಲಿ 'None of the Above' (NOTA) / "ಮೇಲ್ಕಂಡ ಯಾರೂ ಅಲ್ಲ" (ಮೇ ಯಾ ಅ) ಎಂದು ಮುದ್ರಿಸಿ, ಪ್ರತ್ಯೇಕ ಕಾಲಂ ನಲ್ಲಿ ಅವಕಾಶ ಕಲ್ಪಿಸಲು ಆದೇಶಿಸಿದೆ.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಂದೇ ವಾರ್ಡಿನಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು ಸ್ಪರ್ಧಿಸುತ್ತಿರುವುದನ್ನು ಆಯೋಗವು ಗಮನಿಸಿದೆ. ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಯನ್ನು ಗುರುತಿಸಲು ಅನುಕೂಲವಾಗುವಂತೆ ಅವರ ಹೆಸರುಗಳ ಮುಂದೆ ಅವರ ವೃತ್ತಿ ಅಥವಾ ವಿಳಾಸ ಇತ್ಯಾದಿಗಳನ್ನು ತೋರಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಆದರೂ ಸಹ ಮತದಾನದ ಸಮಯದಲ್ಲಿ ಮತದಾರರಿಗೆ ಗೊಂದಲ ಉಂಟಾಗುವುದನ್ನು ತಪ್ಪಿಸಲು ಮತಪತ್ರಗಳಲ್ಲಿ ಅಭ್ಯರ್ಥಿಗಳ ಹೆಸರಿನ ಜೊತೆಗೆ ಅವರ ಭಾವಚಿತ್ರವನ್ನು ಮುದ್ರಿಸುವುದು ಸೂಕ್ತವೆಂದು ಆಯೋಗವು ಅಭಿಪ್ರಾಯಿಸಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮತಯಂತ್ರದಲ್ಲಿ (ಇ.ವಿ.ಎಂ) ಉಪಯೋಗಿಸುವ ಮತಪತ್ರವನ್ನು ಹಾಗೂ ಅಂಚೆ ಮತಪತ್ರವನ್ನು ತಯಾರಿಸುವ ಬಗ್ಗೆ ಸೂಚನೆಗಳನ್ನು ನೀಡುವುದು ಅವಶ್ಯವಾಗಿರುತ್ತದೆ. ಆದುದರಿಂದ ಈ ಆದೇಶ.

**ಆದೇಶ ಸಂಖ್ಯೆ:ರಾಚುಆ 28 ಇಯುಬಿ 2018, ಬೆಂಗಳೂರು, ದಿನಾಂಕ:01.06.2018**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ***ಭಾರತ ಸಂವಿಧಾನದ ಅನುಚ್ಛೇದ 243(ಕೆ) ಮತ್ತು 243(ಜಡ್‌ಎ)***ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ ಹಾಗೂ ***ಕರ್ನಾಟಕ ಪೌರಸಭೆಗಳ(ಕೌನ್ಸಿಲರ್‌ಗಳ ಚುನಾವಣೆ)ನಿಯಮಗಳು, 1977ರ ನಿಯಮ 36, 64 ಬಿ ಮತ್ತು 64 ಜಡ್‌ಡಿ*** ರಲ್ಲಿ ಹಾಗೂ ***ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 29, 70 ಬಿ ಮತ್ತು 70 ಎಕ್ಸ್‌ಎಫ್*** ಗಳಲ್ಲಿ ಪ್ರದತ್ತವಾದ ಅಧಿಕಾರದಂತೆ ರಾಜ್ಯ ಚುನಾವಣಾ ಆಯೋಗವು ವಿದ್ಯುನ್ಮಾನ ಮತಯಂತ್ರದಲ್ಲಿ (ಇ.ವಿ.ಎಂ) ಉಪಯೋಗಿಸುವ ಮತಪತ್ರವನ್ನು ಹಾಗೂ ಅಂಚೆ ಮತಪತ್ರವನ್ನು ತಯಾರಿಸುವ ಬಗ್ಗೆ ಈ ಕೆಳಕಂಡ ಸೂಚನೆಗಳನ್ನು ನೀಡಿದೆ:–

**1. ವಿದ್ಯುನ್ಮಾನ ಮತಯಂತ್ರದಲ್ಲಿ (E.V.M.) ಉಪಯೋಗಿಸುವ ಮತಪತ್ರವನ್ನು ತಯಾರಿಸುವ ಬಗ್ಗೆ ಸೂಚನೆಗಳು:–**

(i) ಭಾರತ್ ಎಲೆಕ್ಟ್ರಾನಿಕ್ಸ್ (ಬಿ.ಇ.ಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರಕ್ಕೆ ಬಳಸುವ ಮತಪತ್ರವು 461.5 ಮಿ.ಮೀ. ಮತ್ತು ಅದರ ಅಗಲ 140 ಮಿ.ಮೀ ಇರತಕ್ಕದ್ದು.

(ii) ಮತಪತ್ರದ ಮೇಲ್ಭಾಗದಲ್ಲಿ ಚುನಾವಣೆ ಹಾಗೂ ಕ್ಷೇತ್ರದ ವಿವರಗಳನ್ನು ನಮೂದಿಸಲು 7.5 ಮಿ.ಮೀ x 140 ಮಿ.ಮೀ ರಷ್ಟು ಜಾಗ ಬಿಡತಕ್ಕದ್ದು.

(iii) ಮೇಲ್ಭಾಗದ ಎಡ ತುದಿಯಲ್ಲಿ ಖಾಲಿ ಬಿಟ್ಟಿರುವ ಜಾಗದಲ್ಲಿ ಮತಪತ್ರದ ಕ್ರಮ ಸಂಖ್ಯೆಯನ್ನು ಮುದ್ರಿಸತಕ್ಕದ್ದು. NOTA ಹೊರತುಪಡಿಸಿ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 15 ಮೀರಿದ್ದಲ್ಲಿ ಮತಪತ್ರವನ್ನು ಒಂದಕ್ಕಿಂತ ಹೆಚ್ಚು ಹಾಳೆಗಳಲ್ಲಿ ಮುದ್ರಿಸಬೇಕಾಗಿರುವುದರಿಂದ ಹಾಳೆಯ ಸಂಖ್ಯೆಯನ್ನು ಮೇಲ್ಭಾಗದ ಬಲ ತುದಿಯಲ್ಲಿ ಮುದ್ರಿಸತಕ್ಕದ್ದು. ಮೇಲಿನ ಕ್ರಮ ಸಂಖ್ಯೆ (ii) ರಂತೆ ಖಾಲಿ ಬಿಡಲಾದ ಸ್ಥಳದಲ್ಲಿ ಚುನಾವಣೆಯ ವಿವರಗಳನ್ನು ಮುದ್ರಿಸತಕ್ಕದ್ದು. ಚುನಾವಣೆಯ ವಿವರಗಳು ಎಂದರೆ, ವಾರ್ಡಿನ ಹೆಸರು ಮತ್ತು ಕ್ರಮ ಸಂಖ್ಯೆ, ಚುನಾವಣೆಯ ವರ್ಷ ಮತ್ತು ಯಾವ ಚುನಾವಣೆ ಎಂಬುದನ್ನು ಕನ್ನಡದಲ್ಲಿ ಮುದ್ರಿಸತಕ್ಕದ್ದು. ಈ ಕೆಳಕಂಡ ಸೂಚನೆಗಳು ಅದನ್ನು ಸ್ಪಷ್ಟಪಡಿಸುತ್ತದೆ:–

**ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಾಗಿ:**

(1) ಪಟ್ಟಣ ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದಂತೆ

**ವಾರ್ಡ್ ಸಂ. – / –– ಪ.ಪಂ.2018. ಸಾರ್ವತ್ರಿಕ / ಉಪ ಚುನಾವಣೆ**

(2) ಪುರಸಭೆ ಚುನಾವಣೆಗೆ ಸಂಬಂಧಿಸಿದಂತೆ

**ವಾರ್ಡ್ ಸಂ. – / –– ಪುರಸಭೆ 2018. ಸಾರ್ವತ್ರಿಕ / ಉಪ ಚುನಾವಣೆ**

(3) ನಗರಸಭೆ ಚುನಾವಣೆಗೆ ಸಂಬಂಧಿಸಿದಂತೆ

**ವಾರ್ಡ್ ಸಂ. – / – – –ನಗರಸಭೆ 2018. ಸಾರ್ವತ್ರಿಕ / ಉಪ ಚುನಾವಣೆ**

(4) ಮಹಾನಗರ ಪಾಲಿಕೆ ಚುನಾವಣೆಗೆ ಸಂಬಂಧಿಸಿದಂತೆ

ವಾರ್ಡ್ ಸಂ. – / – – –ಮ.ನ.ಪಾಲಿಕೆ 2018. ಸಾರ್ವತ್ರಿಕ / **ಉಪ ಚುನಾವಣೆ**

ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು ಹದಿನೈದಕ್ಕಿಂತ ಕಡಿಮೆ ಇದ್ದಲ್ಲಿ ಮೇಲಿನ ವಿವರಗಳನ್ನು ಮುದ್ರಣಕ್ಕೆ ಅನುಕೂಲವಾಗುವಂತೆ ಮತಪತ್ರದ ಮೇಲ್ಭಾಗದಲ್ಲಿ ಅಥವಾ ಕೆಳ ಭಾಗದಲ್ಲಿ ಮುದ್ರಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು ಹದಿನೈದು ಹಾಗೂ ಅದಕ್ಕಿಂತ ಹೆಚ್ಚಾಗಿದ್ದಲ್ಲಿ, ಮತಪತ್ರದ ಎಡಭಾಗದಲ್ಲಿ ಅಡ್ಡವಾಗಿ ಮುದ್ರಿಸುವುದು ಹಾಗೂ ಹಾಗೆ ಮುದ್ರಿಸುವಾಗ ಕ್ರಮ ಸಂಖ್ಯೆ ಪಕ್ಕದಲ್ಲಿ ಒಂದು ದಪ್ಪಗೆರೆಯಿಂದ ಬೇರ್ಪಡಿಸತಕ್ಕದ್ದು.

(iv) ಭಾರತ್ ಎಲೆಕ್ಟ್ರಾನಿಕ್ಸ್ (ಬಿ.ಇ.ಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರದಲ್ಲಿ ಸ್ಪರ್ಧಿಸುವ ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದ ಅಂಕಣವು (Panel) 27.5 ಮಿ.ಮೀ (ಉದ್ದ) x 140 ಮಿ.ಮೀ (ಅಗಲ) ಇರತಕ್ಕದ್ದು. ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರತಿ ಅಂಕಣದ ಮಧ್ಯದಲ್ಲಿ 1 ಮಿ.ಮೀ ಅಗಲದ ಕಪ್ಪು ಬಣ್ಣದ ದಪ್ಪ ರೇಖೆ ಇರತಕ್ಕದ್ದು.

(v) ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ (ಪ್ರಪತ್ರ–7) ರಲ್ಲಿ ಕಾಣಿಸಿರುವಂತಹ ಕ್ರಮದಲ್ಲಿಯೇ ಮತಪತ್ರದ ಮೇಲೆ ಮುದ್ರಿಸತಕ್ಕದ್ದು.

(vi) **ಮತಪತ್ರದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಅಂಕಣ ಮುದ್ರಿಸುವುದು:** ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ **ರಾಚುಆ:14:ಇಯುಬಿ:2017, ದಿನಾಂಕ:10–03–2017** ರಂತೆ ಮತಪತ್ರದಲ್ಲಿ "NOTA" ಅವಕಾಶ ಕಲ್ಪಿಸಲು ಆದೇಶವಾಗಿರುವುದರಿಂದ, ಭಾರತ್ ಎಲೆಕ್ಟ್ರಾನಿಕ್ಸ್ (ಬಿ.ಇ.ಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರ ಬಳಸುವಲ್ಲಿ ಚುನಾವಣೆಯ ವಿವರಗಳನ್ನು ಮುದ್ರಿಸಲು ಮತಪತ್ರದ ಮೇಲ್ಭಾಗದಲ್ಲಿ ಬಿಟ್ಟಿರುವ ಸ್ಥಳದ ಕೆಳಗೆ ಒಂದು ಮಿ.ಮೀ ಅಗಲದ ಕಪ್ಪು ರೇಖೆ ಇರತಕ್ಕದ್ದು. ಆ ರೇಖೆಯ ಕೆಳಗೆ ಪ್ರತಿ ಅಭ್ಯರ್ಥಿಗೆ ಇರುವ **ಪ್ರತ್ಯೇಕ**

**ಅಂಕಣದಲ್ಲಿ (Panel)** ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಸಂಬಂಧಿಸಿದ ಚಿಹ್ನೆಯನ್ನು ಮುದ್ರಿಸತಕ್ಕದ್ದು. ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆ ಇರುವ ಅಂಕಣದ ನಂತರ ಮತ್ತೊಂದು ಅಂಕಣದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಇರತಕ್ಕದ್ದು. ಅದರ ಎದುರಿಗೆ ಈ ಕೆಳಕಂಡಂತೆ ಚಿಹ್ನೆಯನ್ನು ಮುದ್ರಿಸತಕ್ಕದ್ದು.



The NOTA symbol

(vii) ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಮತಪತ್ರದಲ್ಲಿ ಒಂದರ ನಂತರ ಒಂದನ್ನು ಅನುಕ್ರಮವಾಗಿ ಮುದ್ರಿಸಿ ಕೊನೆಯ ಅಂಕಣದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ವನ್ನು ಚಿಹ್ನೆಯ ಸಹಿತ ಮುದ್ರಿಸುವುದು. NOTA ಅಂಕಣ ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಅಂಕಣಗಳ ಸಂಖ್ಯೆಯು 16 ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. (ಮೇಲೆ iii ರಲ್ಲಿ ತಿಳಿಸಿದಂತೆ ಚುನಾವಣಾ ವಿವರಗಳನ್ನು ಮತಪತ್ರದ ಕೆಳಭಾಗದಲ್ಲಿ ಮುದ್ರಿಸತಕ್ಕದ್ದು) NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 32ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. ಅದೇ ರೀತಿ ಮೂರು ಮತ್ತು ನಾಲ್ಕು ಹಾಳೆಗಳಿರುವ ಮತಪತ್ರಗಳಿಗೂ ಅನುಸರಿಸತಕ್ಕದ್ದು.

(viii) ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 15ನ್ನು ಮೀರಿದಲ್ಲಿ, ಮೇಲೆ ತಿಳಿಸಿರುವ ಅಳತೆಯಲ್ಲಿ ಮತಪತ್ರವನ್ನು 2 ಹಾಳೆಗಳಲ್ಲಿ ಮುದ್ರಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 31ನ್ನು ಮೀರಿದಲ್ಲಿ, 3 ಹಾಳೆಗಳಲ್ಲಿ ಮುದ್ರಿಸತಕ್ಕದ್ದು ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 47ನ್ನು ಮೀರಿದಲ್ಲಿ, ಮತಪತ್ರವನ್ನು 4 ಹಾಳೆಗಳಲ್ಲಿ ಮುದ್ರಿಸತಕ್ಕದು.

(ix) ಅಂತಹ ಪ್ರತಿ ಹಾಳೆಗಳಲ್ಲಿ, ಚುನಾವಣೆಯ ವಿವರಗಳನ್ನು ತೋರಿಸಲು ಇರುವ ಜಾಗದಲ್ಲಿ ಹಾಳೆಯ ಸಂಖ್ಯೆಯನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸತಕ್ಕದ್ದು.

(x) NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ (Form-7)ರುವ ಕ್ರಮದಂತೆಯೇ, ಅದೇ ಭಾಷೆಯಲ್ಲಿಯೇ ಮುದ್ರಿಸತಕ್ಕದ್ದು. ಅಭ್ಯರ್ಥಿಯ ಕ್ರಮ ಸಂಖ್ಯೆಯನ್ನು ಇಂಗ್ಲೀಷ್ ಸಂಖ್ಯೆಯಲ್ಲಿ ಮುದ್ರಿಸತಕ್ಕದ್ದು.

(xi) **ಮತಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರ ಮುದ್ರಿಸುವುದು:** ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ ಮತ್ತು ಹೆಸರನ್ನು ಎಡ ಭಾಗದಲ್ಲಿ ಹಾಗೂ ಅಭ್ಯರ್ಥಿಯ ಚಿಹ್ನೆಯನ್ನು ಬಲ ಭಾಗದಲ್ಲಿ ಅವರಿಗೆ ಸಂಬಂಧಿಸಿದ ಅಂಕಣದಲ್ಲಿ ಮುದ್ರಿಸತಕ್ಕದ್ದು. ಅಭ್ಯರ್ಥಿಯ ಹೆಸರು ಮತ್ತು ಅಭ್ಯರ್ಥಿಯ ಚಿಹ್ನೆಯ ನಡುವೆ ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರವನ್ನು ಮುದ್ರಿಸುವುದು.

ಚುನಾವಣೆಗೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತಿ ಚುನಾವಣೆಗೆ ನಾಮಪತ್ರದೊಂದಿಗೆ ಈ ಕೆಳಕಂಡಂತೆ ನಿರ್ದಿಷ್ಟ ವಿವರವುಳ್ಳ ತಮ್ಮ ಭಾವಚಿತ್ರ (Specifications for the Photograph) ವನ್ನು ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ನಾಮಪತ್ರದ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದೊಳಗೆ ಸಲ್ಲಿಸಿರಬೇಕು. ಭಾವಚಿತ್ರದ ಹಿಂಬದಿಯಲ್ಲಿ ಅಭ್ಯರ್ಥಿಯು ರುಜು ಮಾಡಿರಬೇಕು. ಭಾವಚಿತ್ರವನ್ನು ಪಡೆಯುವ ಸಂದರ್ಭದಲ್ಲಿ ಅಭ್ಯರ್ಥಿ / ಸೂಚಕ ಅಥವಾ ಅವನ ಚುನಾವಣಾ ಏಜೆಂಟನಿಂದ ಸದರಿ ಅಭ್ಯರ್ಥಿಯ ಭಾವಚಿತ್ರವು ಚುನಾವಣಾ ದಿನಾಂಕ ಘೋಷಿಸಿದ ನಿಕಟಪೂರ್ವ 3 ತಿಂಗಳ ಹಿಂದಿನ ಅವಧಿಯೊಳಗೆ ತೆಗೆಸಲಾಗಿರುವುದೆಂಬ ಬಗ್ಗೆ ಘೋಷಣೆಯನ್ನು ಪಡೆಯತಕ್ಕದ್ದು. ಘೋಷಣೆಯ ನಮೂನೆ(ಮಾದರಿ)ಯನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

**ಭಾವಚಿತ್ರವು ಈ ಕೆಳಕಂಡ ನಿರ್ದಿಷ್ಟ ವಿವರಗಳಿಗೆ (Specifications for the Photograph) ಒಳಗೊಂಡಂತಿರಬೇಕು:**

1) ಇತ್ತೀಚಿನ, ಅಂದರೆ ಚುನಾವಣೆ ಅಧಿಸೂಚನೆ ಹೊರಡಿಸಿದ ದಿನಾಂಕದ 3 (ಮೂರು) ತಿಂಗಳುಗಳ ಹಿಂದೆ ತೆಗೆಸಲಾದ ಭಾವಚಿತ್ರವನ್ನು ಸಲ್ಲಿಸಬೇಕು;
2) ಭಾವಚಿತ್ರವು ಅಂಚೆ ಸ್ಟಾಂಪ್ ಅಳತೆಯ 2cm X 2.5cm (2cm ಅಗಲ ಮತ್ತು 2.5cm ಎತ್ತರ)ದ್ದಾಗಿರಬೇಕು. ಹಿನ್ನೆಲೆ ಬಿಳಿ ಬಣ್ಣದ್ದಾಗಿದ್ದು, ಮುಖವು ಪೂರ್ಣವಾಗಿ ಕಾಣುವಂತಿದ್ದು, ನೇರವಾಗಿ ನೋಡುವಂತಿರಬೇಕು. ಭಾವಚಿತ್ರವು ಕಪ್ಪು – ಬಿಳುಪು ಅಥವಾ ಬಣ್ಣದ್ದಾಗಿರಬಹುದು; ಹಾಗೂ

3) ಭಾವಚಿತ್ರದಲ್ಲಿ ಧರಿಸಿರುವ ಬಟ್ಟೆ ಯೂನಿಫಾರಂ ಆಗಿರದೇ ಸಾಮಾನ್ಯವಾಗಿರತಕ್ಕದ್ದು, ಕಪ್ಪು ಕನ್ನಡಕ ತಲೆಗೆ ಹ್ಯಾಟ್ ಅಥವಾ ಟೋಪಿ ಧರಿಸಿರಬಾರದು.

(xii) ಮತದಾರನು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗೆ ಮತ ನೀಡದೇ ತನ್ನ ಇಚ್ಛೆಯಂತೆ "ಮೇಲ್ಕಂಡ ಯಾರೂ ಅಲ್ಲ" (NOTA)ಗೆ ಮತ ಹಾಕಲು ಅನುವಾಗುವಂತೆ ಸ್ಪರ್ಧಿಸುತ್ತಿರುವ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯನ್ನು ಒಳಗೊಂಡ ಅಂಕಣದ ನಂತರ ಪ್ರತ್ಯೇಕ ಅಂಕಣ ಇರತಕ್ಕದ್ದು. "ಮೇಲ್ಕಂಡ ಯಾರೂ ಅಲ್ಲ" ಈ ಪದಗಳು ಅಭ್ಯರ್ಥಿಗಳ ಹೆಸರನ್ನು ಯಾವ ಭಾಷೆಯಲ್ಲಿ ಮುದ್ರಿಸಲಾಗಿದೆಯೋ ಅದೇ ಭಾಷೆಯಲ್ಲಿ ಇರತಕ್ಕದ್ದು.

(xiii) ರಾಜ್ಯ ಚುನಾವಣಾ ಆಯೋಗದ ವಿಶೇಷ ಆದೇಶ / ನಿರ್ದೇಶನವನ್ನು ಹೊರತುಪಡಿಸಿ ಮತಪತ್ರವು ಬಿಳಿ ಬಣ್ಣದಲ್ಲಿ ಇರತಕ್ಕದ್ದು.

(xiv) ಮತಪತ್ರದ ನಮೂನೆ (ಮಾದರಿ) ಯನ್ನು **ಅನುಬಂಧ-1**ರಲ್ಲಿ ತೋರಿಸಲಾಗಿದೆ.

**2. ಮತಪತ್ರಗಳನ್ನು ಮುದ್ರಿಸುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು:**

ವಿದ್ಯುನ್ಮಾನ ಮತಯಂತ್ರದಲ್ಲಿ ಮತಪತ್ರಕ್ಕೆ ಮೀಸಲಾದ ಜಾಗದಲ್ಲಿ ಮತಪತ್ರವನ್ನು ಸೇರಿಸುವಾಗ ಚುನಾವಣೆಯ ವಿವರಗಳನ್ನು ಒಳಗೊಂಡ ಅಂಕಣದ ಕೆಳಗಿನ ರೇಖೆ ಹಾಗೂ ಅಭ್ಯರ್ಥಿಗಳ ಹೆಸರುಗಳನ್ನೊಳಗೊಂಡ ಅಂಕಣಗಳ ನಡುವಿನ ರೇಖೆಗಳು ಬ್ಯಾಲೆಟ್ ಯೂನಿಟ್‌ನ ಮೇಲಿರುವ ಗೆರೆಗಳಿಗೆ ಸರಿಹೊಂದುವಂತೆ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆದ್ದರಿಂದ, ಮತಪತ್ರಗಳನ್ನು ಮುದ್ರಿಸುವಾಗ ಬಹಳ ಮುನ್ನೆಚ್ಚರಿಕೆ ವಹಿಸತಕ್ಕದ್ದು. ಮುದ್ರಣಾಲಯದ ತಾಂತ್ರಿಕ ಸಿಬ್ಬಂದಿಗೆ ಬ್ಯಾಲೆಟ್ ಯೂನಿಟ್‌ನ್ನು ತೋರಿಸುವುದರಿಂದ ಅವರು ಮತಪತ್ರವನ್ನು ಮುದ್ರಿಸುವಾಗ ಚುನಾವಣೆಯ ವಿವರಗಳನ್ನೊಳಗೊಂಡ ಜಾಗದ ಅಳತೆ ಹಾಗೂ ಅಭ್ಯರ್ಥಿಗಳ ಅಂಕಣದ ಅಳತೆ ಮತ್ತು ಅವುಗಳನ್ನು ಬೇರ್ಪಡಿಸುವ ರೇಖೆಗಳ ಅಳತೆಗಳನ್ನು ತೆಗೆದುಕೊಂಡು ಬ್ಯಾಲೆಟ್ ಯೂನಿಟ್‌ಗೆ ಸೂಕ್ತವಾಗಿ ಕೂಡುವಂತೆ ಮತಪತ್ರವನ್ನು ಮುದ್ರಿಸಲು ಸಾಧ್ಯವಾಗುವುದು.

**ಬ್ಯಾಲೆಟ್ ಯೂನಿಟ್‌ಗೆ ಸೇರಿಸುವ ಮತಪತ್ರಗಳನ್ನು ಕಟ್ಟುಗಳನ್ನಾಗಿ ಹೊಲಿಯುವ ಅವಶ್ಯಕತೆ ಇರುವುದಿಲ್ಲ.**

**3. ಟೆಂಡರ್ಡ್ ಮತಪತ್ರಗಳು: (ನೀಡಿದ ಮತಪತ್ರಗಳು)**

ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು, 1977ರ ನಿಯಮ 47ರಂತೆ, ತಾನೇ ನಿರ್ದಿಷ್ಟ ಮತದಾರನೆಂದು ಹೇಳಿಕೊಳ್ಳುವ ವ್ಯಕ್ತಿಯು ಅಂತಹ ಮತದಾರನೆಂದು ಈಗಾಗಲೇ ಇನ್ನೊಬ್ಬ ವ್ಯಕ್ತಿಯು ಮತ ನೀಡಿದ ತರುವಾಯ ಬಂದು ಮತಪತ್ರಕ್ಕಾಗಿ ಕೇಳಿಕೊಂಡರೆ, ಪ್ರಿಸೈಡಿಂಗ್ ಅಧಿಕಾರಿಯು ಅವನ ಗುರುತಿನ ಬಗ್ಗೆ ಕೇಳಬಹುದಾದಂತಹ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟ ಮೇಲೆ ಅವನಿಗೆ ವಿದ್ಯುನ್ಮಾನ ಮತಯಂತ್ರದಲ್ಲಿ ಮತದಾನ ಮಾಡಲು ಅವಕಾಶ ನೀಡದೇ ಅದರ ಬದಲಾಗಿ "ನೀಡಿದ ಮತಪತ್ರ" (Tendered Ballot Paper)" ಅನ್ನು ಕೊಡತಕ್ಕದ್ದು. ಅಂತಹ "ನೀಡಿದ ಮತಪತ್ರದ" ವಿನ್ಯಾಸ ಮತ್ತು ವಿವರಗಳು ಬ್ಯಾಲೆಟ್ ಯೂನಿಟ್‌ಗೆ ಅಳವಡಿಸಿದ ಮತಪತ್ರದಂತೆಯೇ ಇರತಕ್ಕದ್ದು. ಅಂತಹ ನೀಡಿದ ಮತಪತ್ರದ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು "ನೀಡಿದ ಮತಪತ್ರ (Tendered Ballot Paper)" ಎಂಬ ಸೀಲನ್ನು ಹಾಕುವುದು ಅಥವಾ ಆ ಪದಗಳನ್ನು ಕೈನಲ್ಲಿ ಬರೆದು ರುಜುವಿನೊಂದಿಗೆ ಹಿಂಬರಹ ಮಾಡತಕ್ಕದ್ದು. ಅಂತಹ "ನೀಡಿದ ಮತಪತ್ರ" ವನ್ನು ಮತದಾರನು ಮತ ಹಾಕಿದ ತರುವಾಯ ಪ್ರಿಸೈಡಿಂಗ್ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು. ಅವರು ಅದನ್ನು ಆ ಉದ್ದೇಶಕ್ಕಾಗಿ ವಿಶೇಷವಾಗಿ ಇಡಲಾದ ಲಕೋಟೆಯಲ್ಲಿ ಇರಿಸತಕ್ಕದ್ದು. ಪೌರಸಭೆಗಳಿಗೆ (ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರಸಭೆ) ಪ್ರಪತ್ರ 19ಬಿ ರಲ್ಲಿ ಹಾಗೂ ಪೌರನಿಗಮಗಳಿಗೆ (ಮಹಾನಗರ ಪಾಲಿಕೆ ಮತ್ತು ಬಿ.ಬಿ.ಎಂ.ಪಿ) ಪ್ರಪತ್ರ 19ಎ ರಲ್ಲಿ ದಾಖಲಿಸಿ ಸಹಿ ಪಡೆಯುವುದು.

**4. ಮತಪತ್ರಗಳ ಅಗತ್ಯತೆಯನ್ನು ಲೆಕ್ಕ ಹಾಕುವುದು:**

ಎಷ್ಟು ಮತಗಟ್ಟೆಗಳು ಇರುತ್ತವೆ, ಎಷ್ಟು ವಿದ್ಯುನ್ಮಾನ ಯಂತ್ರಗಳನ್ನು (ಮೀಸಲು ಯಂತ್ರಗಳು ಸೇರಿ) ಉಪಯೋಗಿಸಲು ಅಂದಾಜಿಸಲಾಗಿದೆ ಮತ್ತು ಪ್ರತಿ ಮತಗಟ್ಟೆಗೆ ಎಷ್ಟು "ನೀಡಿದ ಮತಪತ್ರ (Tendered Ballot Paper)"ಗಳನ್ನು ನೀಡಬೇಕಾಗುತ್ತದೆ ಎಂಬುದರ ಮೇಲೆ ಮುದ್ರಿಸಬೇಕಾದ ಮತಪತ್ರಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು. ಎಷ್ಟು ಮತಪತ್ರಗಳನ್ನು ಮುದ್ರಿಸುವ ಅವಶ್ಯಕತೆ ಇದೆ ಎಂಬುದನ್ನು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಲೆಕ್ಕ ಹಾಕತಕ್ಕದ್ದು:

(ಅ) ಪ್ರತಿ ಬ್ಯಾಲೆಟ್ ಯೂನಿಟ್ ಮೇಲೆ ಅಳವಡಿಸಲು ಒಂದು ಮತಪತ್ರವು ಬೇಕಾಗುತ್ತದೆ. ಆದ್ದರಿಂದ, ಕ್ಷೇತ್ರದ ವ್ಯಾಪ್ತಿಯಲ್ಲಿ ಉಪಯೋಗಿಸಲಾಗುವ ವಿದ್ಯುನ್ಮಾನ ಮತಯಂತ್ರಗಳ ಸಂಖ್ಯೆಗೆ (ಮೀಸಲು ಯಂತ್ರಗಳು ಸೇರಿ) ಸಮನಾಗಿ ಮತಪತ್ರಗಳ ಅವಶ್ಯಕತೆ ಇರುತ್ತದೆ.

(ಆ) ಪ್ರತಿ ಮತಗಟ್ಟೆಗೆ ಇಪ್ಪತ್ತು ಮತಪತ್ರಗಳನ್ನು "ನೀಡಿದ ಮತಪತ್ರ (Tendered Ballot Paper)" ಗಳಾಗಿ ಉಪಯೋಗಿಸಲು ಒದಗಿಸತಕ್ಕದ್ದು. ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಮತಗಟ್ಟೆಗಳ ಸಂಖ್ಯೆಯ ಆಧಾರದ ಮೇಲೆ ಎಷ್ಟು "ನೀಡಿದ ಮತಪತ್ರ (Tendered Ballot Paper)" ಗಳನ್ನು ಒದಗಿಸಬೇಕು ಎಂದು ನಿರ್ಧರಿಸತಕ್ಕದ್ದು.

(ಇ) ಮತಪತ್ರವನ್ನು ಬ್ಯಾಲೆಟ್ ಯೂನಿಟ್‌ಗೆ ಅಳವಡಿಸುವಾಗ ಹಾಳಾಗುವ ಸಾಧ್ಯತೆ ಇರುವುದರಿಂದ ಮತ್ತು ಕೆಲವು ಮತಗಟ್ಟೆಗಳಿಗೆ ಹೆಚ್ಚಿನ "ನೀಡಿದ ಮತಪತ್ರ" (Tendered Ballot Paper) ನೀಡಬೇಕಾದ ಅವಶ್ಯಕತೆ ಇತ್ಯಾದಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮೇಲಿನ ಕಂಡಿಕೆ (ಅ) ಮತ್ತು (ಆ) ರಲ್ಲಿ ಲೆಕ್ಕ ಹಾಕಿದ ಮತಪತ್ರಗಳ ಹೊರತಾಗಿ **ಶೇಕಡ 10** ರಷ್ಟು ಹೆಚ್ಚಿನ ಮತಪತ್ರಗಳನ್ನು ಮುದ್ರಿಸತಕ್ಕದ್ದು.

5. **ಅಂಚೆ ಮತಪತ್ರ:**

***ಕರ್ನಾಟಕ ಪೌರ ನಿಗಮಗಳ(ಚುನಾವಣೆ) ನಿಯಮಗಳು, 1979ರ ನಿಯಮ 35 ಮತ್ತು 36 ಹಾಗೂ ಕರ್ನಾಟಕ ಪೌರಸಭೆಗಳ(ಕೌನ್ಸಿಲರ್‌ಗಳ ಚುನಾವಣೆ)ನಿಯಮಗಳು, 1977ರ ನಿಯಮ 41ಎ ಮತ್ತು 41ಬಿ*** ರಂತೆ ಅಂಚೆ ಮತಪತ್ರವನ್ನು ನೀಡಬೇಕಾಗಿದ್ದು ಅಂಚೆ ಮತಪತ್ರದ ನಮೂನೆ (ಮಾದರಿ) ಯನ್ನು ಅನುಬಂಧ–1ಎ ರಲ್ಲಿ ಒದಗಿಸಲಾಗಿದೆ.

6. **ಮತಪತ್ರಗಳ ಪರಿಶೀಲನೆ:**

ಮತಪತ್ರ ಮುದ್ರಿಸುವ ಸಂದರ್ಭದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆ ಸರಿಯಾಗಿ ಮುದ್ರಿತವಾಗಿದೆಯೇ ಎಂಬ ಬಗ್ಗೆ ಮುದ್ರಣಾಲಯದಲ್ಲಿ ಖಚಿತಪಡಿಸಿಕೊಳ್ಳಲು ವಿಶೇಷ ವ್ಯವಸ್ಥೆಯನ್ನು ಮಾಡತಕ್ಕದ್ದು. ಚಿಹ್ನೆಯ ಗುರುತುಗಳು ಈಗಾಗಲೇ ಅನುಮೋದಿಸಿರುವಂತೆ ಇರುತ್ತವೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು.

ಮುದ್ರಣಾಲಯದಿಂದ ಮುದ್ರಿತ ಮತಪತ್ರಗಳು ಸ್ವೀಕೃತವಾದ ಕೂಡಲೇ ಮುದ್ರಣಾಲಯದವರು ಸರಬರಾಜು ಮಾಡಿದ ಮತಪತ್ರಗಳ ಸಂಖ್ಯೆ ಹಾಗೂ ವಾಸ್ತವವಾಗಿ ಸ್ವೀಕರಿಸಲಾದ ಮತಪತ್ರಗಳ ಸಂಖ್ಯೆಯನ್ನು ಹಾಗೂ ಮತಪತ್ರದಲ್ಲಿ ಏನಾದರೂ ಲೋಪದೋಷಗಳಿವೆಯೇ ಎಂದು ಪರಿಶೀಲಿಸಬೇಕು. ಪರಿಶೀಲನೆಯ ನಂತರ ಲೋಪದೋಷವಿರುವ / ಮತಪತ್ರದಲ್ಲಿ ಮತಪತ್ರದ ಕ್ರಮ ಸಂಖ್ಯೆ ತಪ್ಪಾಗಿರುವ / ಮುದ್ರಿತವಾಗದೇ ಇರುವ / ಅದೇ ಸಂಖ್ಯೆಗಳು ಪುನರಾವರ್ತನೆಯಾಗಿರುವ ಮತಪತ್ರಗಳನ್ನು ಪ್ರತ್ಯೇಕಿಸಿ, ಅವುಗಳನ್ನು ಸೀಲ್ ಮಾಡಿ, ಅವುಗಳ ವಿವರಗಳನ್ನು ಸಂಬಂಧಿಸಿದ ರಿಜಿಸ್ಟರ್‌ನಲ್ಲಿ ನಮೂದು ಮಾಡಿಕೊಳ್ಳತಕ್ಕದ್ದು ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವಿತರಣಾ ಕೇಂದ್ರದಲ್ಲಿ ಆ ಬಗ್ಗೆ ಪ್ರಕಟಿಸಬೇಕು. ಅವಶ್ಯವಿದ್ದಲ್ಲಿ ಪ್ರಕಟಿತ ನೋಟೀಸನ್ನು ಸ್ಪರ್ಧಿಸುವ ಪ್ರತಿ ಅಭ್ಯರ್ಥಿಗೂ ಕಳುಹಿಸಬೇಕು.

7. **ವಿತರಣೆಯಾಗದೆ ಉಳಿದ ಮತಪತ್ರಗಳ ಅಭಿರಕ್ಷೆ:**

ವಿದ್ಯುನ್ಮಾನ ಮತಯಂತ್ರದ ಬ್ಯಾಲೆಟಿಂಗ್ ಯುನಿಟ್‌ಗೆ ಮತಪತ್ರವನ್ನು ಅಳವಡಿಸಿದ ನಂತರ ಹಾಗೂ ಮತಗಟ್ಟೆಗಳಿಗೆ "ನೀಡಿದ ಮತಪತ್ರ" (Tendered Ballot Paper) ಸರಬರಾಜು ಮಾಡಿದ ನಂತರ ಹಂಚಿಕೆಯಾಗದೇ ಮತಪತ್ರಗಳು ಬಾಕಿ ಉಳಿಯಬಹುದು. ಅಂತಹ ಹಂಚಿಕೆಯಾಗದೆ ಬಾಕಿ ಉಳಿದ ಮತಪತ್ರಗಳನ್ನು ಚುನಾವಣೆಯ ದಿನ ಸಂದರ್ಭಾನುಸಾರವಾಗಿ ಯಾವುದಾದರೂ ಮತಗಟ್ಟೆಗೆ ಸರಬರಾಜು ಮಾಡುವುದಕ್ಕಾಗಿ ಒಂದು ಕೇಂದ್ರ ಸ್ಥಳದಲ್ಲಿಡತಕ್ಕದ್ದು. ಅಂತಹ ಹಂಚಿಕೆ ಮಾಡಲಾಗದ ಬಾಕಿ ಉಳಿದ ಮತಪತ್ರಗಳು ಅನಧಿಕೃತ ವ್ಯಕ್ತಿಗಳ ಕೈಗೆ ಸಿಗದಂತೆ ನೋಡಿಕೊಳ್ಳತಕ್ಕದ್ದು. ಅವುಗಳನ್ನು ಚುನಾವಣಾಧಿಕಾರಿಯ ಅಧೀನದಲ್ಲಿ ಅಥವಾ ಚುನಾವಣಾಧಿಕಾರಿಯು ನಿರ್ದಿಷ್ಟವಾಗಿ ನಾಮನಿರ್ದೇಶಿಸಿದ ಸಹಾಯಕ ಚುನಾವಣಾಧಿಕಾರಿಯ ಅಧೀನದಲ್ಲಿ ಸುರಕ್ಷಿತವಾಗಿ ಇಡತಕ್ಕದ್ದು.

ಚುನಾವಣೆ ಮುಗಿದ ನಂತರ ಅಂತಹ ಹಂಚಿಕೆಯಾಗದೆ ಬಾಕಿ ಉಳಿದ ಹೆಚ್ಚುವರಿ ಮತಪತ್ರಗಳನ್ನು ಒಂದು ಸ್ಟೀಲ್ ಪೆಟ್ಟಿಗೆಯಲ್ಲಿ ಅಥವಾ ಡಬ್ಬದಲ್ಲಿ ಹಾಕಿ ತಹಶೀಲ್ದಾರ್‌ರವರ ಕಛೇರಿಗೆ ಖಜಾನೆಯಲ್ಲಿ ಇಡುವುದಕ್ಕಾಗಿ ಕಳುಹಿಸತಕ್ಕದ್ದು.

ಮೇಲ್ಕಂಡ ಸೂಚನೆಗಳು ಮುಂದಿನ ಎಲ್ಲಾ ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ ಮತ್ತು ಉಪ ಚುನಾವಣೆಗಳಿಗೆ ಜಾರಿಗೆ ಬರುತ್ತದೆ.

ಆದೇಶಾನುಸಾರ

**ಅರ್ಚನ.ಎಂ.ಎಸ್**
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

# ಮಾದರಿ

ಕ್ರ. ಸಂ. 0001 ವಾರ್ಡ್ ಸಂಖ್ಯೆ : ___________/ _________ ಮಹಾನಗರ ಪಾಲಿಕೆ/
ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಸಾರ್ವತ್ರಿಕ/ ಉಪಚುನಾವಣೆ–2018

| | | | |
|---|---|---|---|
| 1 | ಅಶೋಕರೆಡ್ಡಿ. ಕೆ.ಎ | ಭಾವಚಿತ್ರ |  |
| 2 | ಬಿ. ಆಂಜನೇಯರೆಡ್ಡಿ | ಭಾವಚಿತ್ರ |  |
| 3 | ಮಹಮದ್ ನಾಸೀರ್ | ಭಾವಚಿತ್ರ |  |
| 4 | ಬಿ.ಪಿ.ವೆಂಕಟೇಶ್ | ಭಾವಚಿತ್ರ |  |
| 5 | ಪಿ.ಶ್ರೀನಿವಾಸ್ | ಭಾವಚಿತ್ರ |  |
| 6 | ಎನ್.ಸಂತೋಷ್ | ಭಾವಚಿತ್ರ |  |
| 7 | ಮೇಲ್ಕಂಡಯಾರೂಅಲ್ಲ | |  |

# ಅನುಬಂಧ – 1ಎ
## ಮಾದರಿ ಅಂಚೆ ಮತಪತ್ರ

ವಾರ್ಡ್ ಸಂ. – / –– ಪ.ಪಂ.2018. ಸಾರ್ವತ್ರಿಕ / ಉಪ ಚುನಾವಣೆ

**ಅಂಚೆ ಮತಪತ್ರ**

ಮತದಾರರ ಪಟ್ಟಿಯ ಭಾಗ ಸಂಖ್ಯೆ : 73
ಮತದಾರನ ಕ್ರಮ ಸಂಖ್ಯೆ : 205

ಕ್ರಮ ಸಂಖ್ಯೆ : **0003**

---

ವಾರ್ಡ್ ಸಂ. – / –– ಪ.ಪಂ.2018. ಸಾರ್ವತ್ರಿಕ /ಉಪ ಚುನಾವಣೆ

**ಅಂಚೆ ಮತಪತ್ರ**

ಕ್ರಮಸಂಖ್ಯೆ :**0003**

| | | |
|---|---|---|
| ಅರವಿಂದ<br>(ಪಕ್ಷದ ಹೆಸರು) | ಭಾವಚಿತ್ರ | |
| ಗಣೇಶಮೂರ್ತಿ<br>(ಪಕ್ಷದ ಹೆಸರು) | ಭಾವಚಿತ್ರ | |
| ಭಾರತಿ<br>(ಪಕ್ಷೇತರ) | ಭಾವಚಿತ್ರ | |
| "ಮೇಲ್ಕಂಡ ಯಾರೂ ಅಲ್ಲ" (**NOTA**) | | |

## ಅನುಬಂಧ – 2

## ಅಭ್ಯರ್ಥಿಯ ಭಾವಚಿತ್ರವನ್ನು ಅಭ್ಯರ್ಥಿ / ಅಭ್ಯರ್ಥಿಯ ಏಜೆಂಟ್ / ಸೂಚಕ ಸಲ್ಲಿಸುವಾಗ ಮಾಡಬೇಕಾದ ಘೋಷಣೆ

ವಿಷಯ: .................................. ಮಹಾನಗರ ಪಾಲಿಕೆ / ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿ ವಾರ್ಡ್ ನಂ. .............ಕ್ಕೆ ಸಾರ್ವತ್ರಿಕ ಚುನಾವಣೆ / ಉಪ ಚುನಾವಣೆ

–:–:–:–

ಶ್ರೀ / ಶ್ರೀಮತಿ ............................, ಬಿನ್ / ಕೋಂ ಶ್ರೀ / ಶ್ರೀಮತಿ ..............................., (ವಿಳಾಸ) ಆದ ನಾನು ......................................, ನಗರ ಪಾಲಿಕೆ / ನಗರಸಭೆ / ಪರಸಭೆ / ಪಟ್ಟಣ ಪಂಚಾಯಿತಿಯ ............................, ವಾರ್ಡ್‌ನ ಅಭ್ಯರ್ಥಿಯಾಗಿದ್ದು, ಇದರೊಂದಿಗೆ ನನ್ನ ಭಾವಚಿತ್ರವನ್ನು ಮತಪತ್ರದಲ್ಲಿ ಮುದ್ರಿಸುವುದಕ್ಕಾಗಿ ಸಲ್ಲಿಸುತ್ತಿದ್ದೇನೆ. ಇದನ್ನು ಚುನಾವಣಾ ದಿನಾಂಕ ಘೋಷಿಸಿದ ನಿಕಟಪೂರ್ವ 3 ತಿಂಗಳ ಹಿಂದಿನ ಅವಧಿಯೊಳಗೆ ತೆಗೆಸಲಾಗಿದೆಯೆಂದು ಈ ಮೂಲಕ ಘೋಷಿಸುತ್ತೇನೆ.

(ಇದನ್ನು ಅಭ್ಯರ್ಥಿಯೇ ಭಾವಚಿತ್ರ ಸಲ್ಲಿಸುತ್ತಿದ್ದಲ್ಲಿ, ಭರ್ತಿ ಮಾಡುವುದು)

ಅಥವಾ

ಶ್ರೀ / ಶ್ರೀಮತಿ ......................................, ಚುನಾವಣಾ ಏಜೆಂಟ್ / ಸೂಚಕನಾದ ನಾನು ಶ್ರೀ / ಶ್ರೀಮತಿ ............................, ಬಿನ್ / ಕೋಂ ............................, (ಅಭ್ಯರ್ಥಿ ಹೆಸರು / ವಿಳಾಸ) ರವರು ಮೇಲ್ಕಂಡ ಚುನಾವಣಾ ಅಭ್ಯರ್ಥಿಯಾಗಿದ್ದು ಇದರೊಟ್ಟಿಗೆ ಸದರಿ ಅಭ್ಯರ್ಥಿಯ ಭಾವಚಿತ್ರವನ್ನು ಮತಪತ್ರದಲ್ಲಿ ಮುದ್ರಿಸಲು ಸಲ್ಲಿಸುತ್ತಿದ್ದೇನೆ. ಈ ಭಾವಚಿತ್ರವು ಚುನಾವಣಾ ದಿನಾಂಕ ಘೋಷಿಸಿದ ನಿಕಟಪೂರ್ವ 3 ತಿಂಗಳ ಹಿಂದಿನ ಅವಧಿಯೊಳಗೆ ತೆಗೆಸಲಾಗಿರುವುದೆಂದು ಈ ಮೂಲಕ ಘೋಷಿಸುತ್ತೇನೆ.

(ಇದನ್ನು ಚುನಾವಣಾ ಏಜೆಂಟ್ / ಸೂಚಕರು ಅಭ್ಯರ್ಥಿಯ ಭಾವಚಿತ್ರ ಸಲ್ಲಿಸುತ್ತಿದ್ದಲ್ಲಿ, ಭರ್ತಿ ಮಾಡಬೇಕು)

ದಿನಾಂಕ:

ಹೆಸರು :

ವಿಳಾಸ :

ದೂರವಾಣಿ ಸಂಖ್ಯೆ :

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 25